| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 480/2024**

ಪಿಡ್ಲ್ಯೂಃ 2 ಸಿಡ್ಲ್ಯೂಃ 2

ಸಾಕ್ಷಿದಾರಳ ಹೆಸರು : ಸಂಪಾ
ಗಂಡನ ಹೆಸರು : ದಿ. ವಾಸು ಶೆಟ್ಟಿ
ಪ್ರಾಯ : 75 ವರ್ಷ
ಉದ್ಯೋಗ : ಗೃಹಿಣಿ
ವಾಸ : ಬ್ಯಾಣ, ಶಿವಪುರ ಗ್ರಾಮ, ಹೆಬ್ರಿ

ದಿನಾಂಕ 25.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

1 ನೇ ಆರೋಪಿ ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. 2 ನೇ ಆರೋಪಿ ಮಂಜುಳಾ ರವರು ಹಾಜರಿದ್ದಾರೆ . 1 ಮತ್ತು 2 ನೇ ಆರೋಪಿತರ ಪರಿಚಯ ಇಲ್ಲ. ನೋಡಿ ಗುರುತಿಸಿದ್ದೇನೆ.

ಚಾಸಾ-1 ನನ್ನ ದೂರದ ಸಂಬಂಧಿ. ಚಾಸಾ-3 ರಿಂದ 5 ರವರು ನನ್ನ ಮನೆಯ ಹತ್ತಿರದವರು.

ದಿಃ21.02.2024 ರಂದು ಬೆಳಿಗ್ಗೆ ಸಮಯ 11.00 ಗಂಟೆಗೆ ನಾನು ಮನೆಯಲ್ಲಿದ್ದಾಗ ಚಾಸಾ-1 ರವರು ಬೊಬ್ಬೆ ಹಾಕಿದರು. ಆ ಕಾರಣ ನಾನು ಅವರ ಮನೆಯ ಬಳಿ ಹೋಗಿರುತ್ತೇನೆ. ಆ ಸಮಯದಲ್ಲಿ 1 ನೇ ಆರೋಪಿ ಓಡಿಕೊಂಡು ಮುಂದೆ ಹೋಗಿರುತ್ತಾರೆ ಮತ್ತು 2 ನೇ ಆರೋಪಿ ಅಲ್ಲಿಯೇ ಚಾಸಾ-1 ರವರ ಮನೆಯ ಪಕ್ಕದಲ್ಲಿ ಇದ್ದರು. ನಾನು ಚಾಸಾ-1 ರವರನ್ನು ವಿಚಾರಿಸಿದಾಗ, ಆರೋಪಿಗಳು ಚಾಸಾ-1 ರವರ ಮನೆಗೆ ಅಕ್ರಮವಾಗಿ ಪ್ರವೇಶ ಮಾಡಿದ್ದು, 2 ನೇ ಆರೋಪಿ ಚಾಸಾ-1 ರವರ ಸೀರೆಯ ಸೆರಗನ್ನು ಅವರ ಮುಖಕ್ಕೆ ಮತ್ತು ಕುತ್ತಿಗೆ ಸುತ್ತಿ ಒತ್ತಿ ಹಿಡಿದಿರುತ್ತಾರೆ ಆಗ 1 ನೇ ಆರೋಪಿ ಚಾಸಾ-1 ರವರ ಮೊಬೈಲ್

ಫೋನ್ ಮತ್ತು ಚಿನ್ನದ ಸರವನ್ನು ಕಸಿದುಕೊಂಡಿರುತ್ತಾರೆ ಮತ್ತು ಅವರ ಕೈಯಲ್ಲಿದ್ದ 2 ಚಿನ್ನದ ಬಳೆಗಳನ್ನು ಕಸಿದೊಕೊಳ್ಳಲು ಪ್ರಯತ್ನ ಮಾಡಿರುತ್ತಾರೆ ಆಗ 2 ನೇ ಆರೋಪಿಯು 1 ನೇ ಆರೋಪಿಗೆ ಜಬ್ಬಿಯನ್ನು ತೆಗೆದು ಬರುತ್ತೇನೆ . ಆಗ 1 ನೇ ಆರೋಪಿ ಚಿನ್ನದ ಸರ ಹಾಗೂ ಮೊಬೈಲ್ ನ್ನು ಎತ್ತಿಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ರವರು ಬೊಬ್ಬೆ ಹಾಕಿದ ಕಾರಣ 2 ನೇ ಆರೋಪಿ ಚಾಸಾ-1 ರವರನ್ನು ತಳ್ಳಿ ಹಾಕಿ ಹೋಗಿರುತ್ತಾರೆ, ಆ ವಿಚಾರವನ್ನು ನನಗೆ ಹೇಳಿರುತ್ತಾರೆ.

ಆ ನಂತರ ನಾನು ಮತ್ತು ಅಲ್ಲಿ ನೆರೆದವರು ಚಾಸಾ-1 ರವರನ್ನು ಸಮಾಧಾನ ಮಾಡಿರುತ್ತೇವೆ. ಘಟನೆಯ ಕುರಿತು ದೂರು ನೀಡಿರುವ ವಿಚಾರ ಗೊತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀಮತಿ ಐ ಎಸ್ ಕೆ ವಕೀಲರಿಂದಃ

ಆರೋಪಿಗಳ ಪರಿಚಯ ಇರುವುದಿಲ್ಲ, 2 ನೇ ಆರೋಪಿಯನ್ನು ನೋಡಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯದಲ್ಲಿ ಚಾಸಾ-1 ರವರು ನನಗೆ ತಿಳಿಸಿದ ವಿಚಾರವನ್ನು ಹೇಳಿರುತ್ತೇನೆ. ನನ್ನ ಮತ್ತು ಚಾಸಾ-1 ರವರು ಮನೆಗೆ 2-3 ನಿಮಿಷದಷ್ಟು ದೂರ ಇರುತ್ತದೆ. ಚಾಸಾ-1 ಬೊಬ್ಬೆ ಹಾಕಿದ ಮೇರೆಗೆ ನಾನು ಅವರ ಮನೆಗೆ ಹೋದಾಗ ಚಾಸಾ-1 ಮಾತ್ರ ಇದ್ದರು. ಈ ಘಟನೆಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ನನ್ನನ್ನು ಪೊಲೀಸರು ಯಾವುದೆ ವಿಚಾರ ಮಾಡಿರುವುದಿಲ್ಲ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly

turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala